ಕಬ್ಬು ಸಾಗಾಣಿಕೆ

1791(2174); ಶ್ರೀ ಆನಂದ ಸಿಂಗ್ (ವಿಜಯ ನಗರ–ಬಳ್ಳಾರಿ)

1) ಮಾನ್ಯ ಉಚ್ಚನ್ಯಾಯಾಲಯದ ಆದೇಶದ ಪ್ರಕಾರ ಐ.ಎಸ್.ಆರ್ ಸಕ್ಕರೆ ಕಾರ್ಖಾನೆಯವರು ರೈತರ ಬಾಕಿ ಹಣ ಕೊಡದೆ ಇದ್ದ ಪಕ್ಷದಲ್ಲಿ ಕಾರ್ಖಾನೆಯನ್ನು ಹರಾಜು ಹಾಕಿ ಬಾಕಿ ಕೊಡಿಸಲು ಜಿಲ್ಲಾಡಳಿತಕ್ಕೆ ಘನ ನ್ಯಾಯಾಲಯವು ಆದೇಶ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

3) ರೈತರು ಬೆಳೆದಿರುವ ಕಬ್ಬನ್ನು ಐ.ಎಸ್.ಆರ್ ಸಕ್ಕರೆ ಕಾರ್ಖಾನೆ ಹೊರತುಪಡಿಸಿ ಬೇರೆ ಕಾರ್ಖಾನೆಗಳಿಗೆ ಸಾಗಾಣಿಕೆ ಮಾಡಲು ಯಾವ ಕ್ರಮ ಕೈಗೊಂಡಿದೆ;

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಸಹಕಾರ ಮತ್ತು ಸಕ್ಕರೆ ಸಚಿವರು)

1) **ಮತ್ತು 2)** ಐ.ಎಸ್.ಆರ್. ಸಕ್ಕರೆ ಕಾರ್ಖಾನೆಯು ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸಬೇಕಾದ ಬಾಕಿ ಮೊತ್ತವನ್ನು ಭೂಕಂದಾಯ ಬಾಕಿ ಎಂದು ವಸೂಲು ಮಾಡುವಂತೆ ಜಿಲ್ಲಾಧಿಕಾರಿ, ಬಳ್ಳಾರಿ ಇವರಿಗೆ ಸರ್ಕಾರವು ಸೂಚನೆ ನೀಡಿತ್ತು. ಈ ಸಂಬಂಧ ಕೈಗೊಳ್ಳಲಾದ ಪ್ರಕ್ರಿಯೆಯನ್ನು ಪ್ರಶ್ನಿಸಿ ಸದರಿ ಕಂಪನಿಯು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 107579/2014 ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ 18/08/2014 ರ ತೀಪಿನಲ್ಲಿ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳುವಂತೆ ಜಿಲ್ಲಾಡಳಿತಕ್ಕೆ ಸೂಚನೆ ನೀಡಿರುತ್ತದೆ. ಈ ಸಂಬಂಧ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಐ.ಎಸ್.ಆರ್. ಕಾರ್ಖಾನೆಯಿಂದ ರೈತರಿಗೆ ಬರಬೇಕಾದ ಬಾಕಿ ಮೊತ್ತದ ವಿವರಗಳು ಈ ಕೆಳಕಂಡಂತಿದೆ.

ವರ್ಷ	ಬಾಕಿ ಮೊತ್ತ (₹ ಗಳಲ್ಲಿ)
2002–03	1,92,49,525
2003–04	75,40,012
2006–07	6,40,56,452
2013–14	7,29,32,164
ಒಟ್ಟು	**16,37,78,153**

ಕಬ್ಬು (ನಿಯಂತ್ರಣ) ಆದೇಶ 1966 ರ ಕಂಡಿಕೆ 3(3ಎ) ಪ್ರಕಾರ ಕಬ್ಬು ಸರಬರಾಜು ಮಾಡಿದ ದಿನದಿಂದ 14 ದಿನಗಳೊಳಗೆ ಹಣ ಪಾವತಿಸಬೇಕು. ತಪ್ಪಿದಲ್ಲಿ ವಿಳಂಬವಾದ ಅವಧಿಗೆ ವಾರ್ಷಿಕ ಶೇ.15 ರಷ್ಟು ಬಡ್ಡಿ ಪಾವತಿಸಬೇಕಾಗುತ್ತದೆ.

ಸದರಿ ಕಾರ್ಖಾನೆಯವರು ರೈತರಿಗೆ ಪಾವತಿಸಬೇಕಾದ ಬಾಕಿ ಮೊತ್ತವನ್ನು ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲಿ ಮಾಡುವ ಸಲುವಾಗಿ ಕಬ್ಬು (ನಿಯಂತ್ರಣ) ಆದೇಶ 1966 ರ ಕಲಂ 3(8)ರಂತೆ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಇವರ ಮೂಲಕ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಇವರಿಗೆ ಈ ಕೆಳಕಂಡಂತೆ ವಸೂಲಾತಿ ಪ್ರಮಾಣ ಪತ್ರ ಜಾರಿಗೊಳಿಸಲಾಗಿದೆ.

ಬಾಕಿ ವರ್ಷ	ಮೊತ್ತ (₹ ಗಳಲ್ಲಿ)
2002–03	1,92,49,525
2003–04	75,40,012
2006–07	6,40,56,452
2013–14	7,29,32,164
ಒಟ್ಟು	**16,37,78,153**

ಸದರಿ ಕಾರ್ಖಾನೆಯಿಂದ ಬಾಕಿ ಮೊತ್ತವನ್ನು ವಸೂಲು ಮಾಡಲು ಕ್ರಮ ಜರುಗಿಸುವಂತೆ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರು ತಹಶೀಲ್ದಾರರು, ಹೊಸಪೇಟೆ ಇವರಿಗೆ ಸೂಚಿಸಿರುತ್ತಾರೆ. ಮುಂದುವರೆದು ಭೂಕಂದಾಯ ಕಾಯ್ದೆ ಅಡಿ ನೋಟೀಸು ಜಾರಿ ಮಾಡಿ ದಿನಾಂಕ 26/07/2014 ರಂದು ಕಾರ್ಖಾನೆಯ ಸ್ವತ್ತನ್ನು ಜಪ್ತಿ ಮಾಡಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಐ.ಎಸ್.ಆರ್. ಸಕ್ಕರೆ ಕಾರ್ಖಾನೆಯಿಂದ ರಿಟ್ ಅರ್ಜಿ ನಂ. 107579/2014 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಇವರಲ್ಲಿ ದಾವೆ ಹೂಡಲಾಗಿದ್ದು, ಮಾನ್ಯ ಉಚ್ಚನ್ಯಾಯಾಲಯದ ಆದೇಶ ದಿನಾಂಕ 18/08/2014 ರಲ್ಲಿ ಭೂಕಂದಾಯ ಕಾಯ್ದೆ ಕಲಂ 165 ರಡಿ ಕ್ರಮವಹಿಸಲು ನಿರ್ದೇಶಿಸಿದ್ದರಿಂದ ಐ.ಎಸ್.ಆರ್. ಶುಗರ್ಸ್, ಚಿತ್ತವಾಡಗಿ ಇವರಿಂದ ಸರ್ಕಾರಕ್ಕೆ ಸಂದಾಯವಾಗಬೇಕಾಗಿದ್ದ ₹ 9,08,45,989/– ಬಾಕಿ ಮೊತ್ತವನ್ನು ವಸೂಲಿ ಮಾಡುವ ಬಗ್ಗೆ ತಹಶೀಲ್ದಾರರು, ಹೊಸಪೇಟೆ ಇವರು ಭೂಕಂದಾಯ ಕಾಯ್ದೆ ಕಲಂ 165 ರಡಿ ಘೋಷಣೆಯನ್ನು ದಿನಾಂಕ 30/10/2014 ರಂದು ಹೊರಡಿಸಿರುತ್ತಾರೆ. **ಅನುಬಂಧ–1**.

ಇದರಂತೆ ಸದರಿ ಐ.ಎಸ್.ಆರ್. ಸಕ್ಕರೆ ಕಾರ್ಖಾನೆಯಿಂದ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಬಾಕಿ ಬಿಲ್ಲು ಮೊತ್ತವನ್ನು ಕೊಡಿಸುವ ಪ್ರಕ್ರಿಯೆ ಜಾರಿಯಲ್ಲಿದ್ದು, ಆದ್ಯತೆ ಮೇಲೆ ಕ್ರಮ ಜರುಗಿಸಲಾಗುವುದು.

3) 2014–15 ನೇ ಸಾಲಿಗೆ ಐ.ಎಸ್.ಆರ್. ಸಕ್ಕರೆ ಕಾರ್ಖಾನೆ ಕಬ್ಬು ನುರಿಸುವ ಕಾರ್ಯ ಪ್ರಾರಂಭಿಸುವ ಬಗ್ಗೆ ಜಿಲ್ಲಾಡಳಿತದಿಂದ 2–3 ಸಭೆಗಳನ್ನು ಜರುಗಿಸಿದ್ದು, ಸಭೆಗಳನ್ವಯ ಕಾರ್ಖಾನೆಯು ಕಬ್ಬು ನುರಿಸುವ ಹಂಗಾಮನ್ನು ಪ್ರಾರಂಭಿಸುವ ಬಗ್ಗೆ ತಿಳಿಸಿದ್ದು, ರೈತರು ಸಹ ಕಬ್ಬು ಸರಬರಾಜು ಮಾಡಲು ಒಪ್ಪಿದ್ದರಿಂದ ಬೇರೆ ಕಾರ್ಖಾನೆಗಳಿಗೆ ಕಬ್ಬು ಸಾಗಾಣಿಕೆ ಮಾಡುವ ಬಗ್ಗೆ ಯಾವುದೇ ಕ್ರಮ ವಹಿಸಿರುವುದಿಲ್ಲ.

ಮಾನ್ಯ ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ಆನಂದ ಸಿಂಗ್ (ವಿಜಯನಗರ–ಬಳ್ಳಾರಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2174ಕ್ಕೆ ದಿನಾಂಕ 19/12/2014ರಂದು ನೀಡಲಾದ ಉತ್ತರದ ಅನುಬಂಧ–1

ಭೂ ಕಂದಾಯ ಕಾಯ್ದೆ, 1964ರ ಕಲಂ 165ರ ಅಡಿ ಐ.ಎಸ್.ಆರ್. ಸಕ್ಕರೆ ಕಾರ್ಖಾನೆ, ಚಿತ್ತವಾಡಿಗಿ, ಹೊಸಪೇಟೆ ತಾಲ್ಲೂಕು ಇವರಿಂದ ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸಬೇಕಾದ ಅಸಲು ಮತ್ತು ಬಡ್ಡಿ ಬಾಕಿ ಮೊತ್ತವನ್ನು ವಸೂಲು ಮಾಡುವ ಬಗ್ಗೆ ಘೋಷಣೆ

ಕರ್ನಾಟಕ ಸರ್ಕಾರ

ಸಂ.ಕಂ.ಡಿಸಿಬಿ/07/14-15. ತಹಸೀಲ್ದಾರರ ಕಾರ್ಯಾಲಯ,
ಹೊಸಪೇಟೆ.ದಿನಾಂಕ. 30-10-2014.

ಭೂ ಕಂದಾಯ ಕಾಯ್ದೆ ಕಲಂ 165 ರಡಿ ಐ.ಎಸ್.ಆರ್. ಸಕ್ಕರೆ ಕಾರ್ಖಾನೆ, ಚಿತ್ತವಾಡಿಗಿ, ಹೊಸಪೇಟೆ ತಾಲ್ಲೂಕು ಇವರಿಂದ ಸರ್ಕಾರಕ್ಕೆ ಸಂದಾಯವಾಗಬೇಕಾಗಿದ್ದ ರೂ.9,08,45,989/- ಬಾಕಿ ಮೊತ್ತವನ್ನು ವಸೂಲಿ ಮಾಡುವ ಬಗ್ಗೆ ಘೋಷಣೆ (Proclamation).

* * * *

ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಇವರ ಆದೇಶ ಸಂಖ್ಯೆ ಡಿಎಸ್‌ಕೆ/ಎಸ್‌ಟಿಬಿ/12/2014-15 ದಿನಾಂಕ 28-06-2014 ರ ಆದೇಶದಂತೆ ಐ.ಎಸ್.ಆರ್. ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಪಾವತಿಸಬೇಕಾದ ಬಾಕಿ ಮೊತ್ತ (ಶೇ.15 ರಷ್ಟು) ಬಡ್ಡಿ ಸೇರಿಸಿ ರೂ.9,08,45,989/- ಭೂ ಕಂದಾಯ ರೂಪದಲ್ಲಿ ವಸೂಲಿ ಮಾಡುವಂತೆ ಆದೇಶಿಸಿರುತ್ತಾರೆ. ಸದರಿ ಆದೇಶ ಹಾಗೂ ರಾಜ್ಯ ಉಚ್ಚನ್ಯಾಯಾಲಯ ರಿಟ್ ಅರ್ಜಿ ಸಂಖ್ಯೆ 107579/2014 (KLR-RES) ರಲ್ಲಿ ನೀಡಿರುವ ನಿರ್ದೇಶನಗಳ ಹಿನ್ನೆಲೆಯಲ್ಲಿ ದಿನಾಂಕ 15-10-2014 ರಂದು ಗ್ರಾಮಲೆಕ್ಕಾಧಿಕಾರಿಗಳು ಚಿತ್ತವಾಡಿಗಿ ಇವರಿಂದ ನಮೂನೆ-37 ರ ನೋಟೀಸು ಜಾರೀ ಗೊಳಿಸಲಾಗಿರುತ್ತದೆ. ಹಾಗೂ ದಿನಾಂಕ 25-10-2014 ರ ಒಳಗಾಗಿ ರೂ.9,08,45,989/- ಮತ್ತು ಶೇ.15 ರಷ್ಟು ಬಡ್ಡಿ ಸೇರಿಸಿ ಬಾಕಿ ಮೊತ್ತವನ್ನು ಪಾವತಿಸಬೇಕಾಗಿದ್ದು ಸದರಿ ಮೊತ್ತವನ್ನು ಬಾಕಿದಾರರು ಪಾವತಿಸಿರುವುದಿಲ್ಲವೆಂದು ಗ್ರಾಮಲೆಕ್ಕಾಧಿಕಾರಿಗಳು ವರದಿ ಸಲ್ಲಿಸಿರುತ್ತಾರೆ. ಕಾರಣ ಭೂ ಕಂದಾಯ ಕಾಯಿದೆ ಕಲಂ 161(ಎ)(ಬಿ) ರಂತೆ ಚರಾಸ್ತಿಯನ್ನು ಜಪ್ತಿ ಮಾಡಲು ಬಾಕಿ ಮೊತ್ತಕ್ಕೆ ಸಮಾನಾಂತರವಾದ ಚರಾಸ್ತಿ ದೊರೆಯದೇ ಇದ್ದುದರಿಂದ ಭೂ ಕಂದಾಯ ಕಾಯಿದೆ ಕಲಂ 165 ಮತ್ತು 166 ರಂತೆ ಐ.ಎಸ್.ಆರ್. ಸಕ್ಕರೆ ಕಾರ್ಖಾನೆಯವರಿಂದ ಮೇಲಿನ ಬಾಕಿ ಮೊತ್ತ ರೂ.9,08,45,989/- ಮತ್ತು ಶೇ.15 ರಷ್ಟು ಬಡ್ಡಿ ಸೇರಿಸಿ ಬಾಕಿ ಮೊತ್ತವನ್ನು ವಸೂಲಾತಿ ಸಲುವಾಗಿ ಈ ಕೆಳಕಂಡ ಆಸ್ತಿಯನ್ನು (Attachment) ಜಪ್ತಿ ಮಾಡಲಾಗಿದೆ.

ಆದ್ದರಿಂದ ಭೂ ಕಂದಾಯ ಕಾಯ್ದೆ ಕಲಂ 166(1)ರಂತೆ ಜಪ್ತಿ ಮಾಡಿರುವ ಈ ಕೆಳಗಿನ ಆಸ್ತಿಗೆ ಸಂಬಂದಿಸಿದಂತೆ ಸದರಿ ಸುಸ್ತಿ ಬಾಕಿದಾರರಾದ ಐ.ಎಸ್.ಆರ್. ಸಕ್ಕರೆ ಕಾರ್ಖಾನೆ, ಹೊಸಪೇಟೆ ಅಡಳಿತ ಮಂಡಳಿಯು ಯಾವುದೇ ಕ್ರಯ ಅಡವು (Mortagage) ಇಲ್ಲವೇ ಇನ್ನಾವುದೇ ತರಹದ ಪರಭಾರೆ ಮಾಡತಕ್ಕದ್ದಲ್ಲವೆಂದು ಮತ್ತು ಯಾವುದೇ ವ್ಯಕ್ತಿಯು ಸದರಿ ಸ್ವತ್ತಿನಿಂದ ಯಾವುದೇ ಲಾಭ, ಪರಭಾರೆ ಇಲ್ಲವೇ ಅಡವು ಪಡೆಯತಕ್ಕದಲ್ಲವೆಂದು ನಿಷೇದಿಸಲಾಗಿದೆ.

ಸದರಿ ಕಲಂ 166(3) ರಂತೆ ಸುಸ್ತಿ ಬಾಕಿದಾರರು ಕಲಂ 166(1) ರನ್ವಯ ಮಾಡಿರುವ ಮೇಲಿನ ಘೋಷಣೆಯ ನಂತರ ಸರ್ಕಾರದ ಹಿತಾಸಕ್ತಿಗೆ ವಿರುದ್ಧವಾಗಿ ಯಾರಾದರೂ ಖರೀದಿ, ದಾನ ಅಥವಾ

3

ಇನ್ನಾವುದೇ ರೂಪದಲ್ಲಿ ಹಕ್ಕುಪಡೆದಲ್ಲಿ ಇಲ್ಲವೇ ಸದರಿ ಸ್ವತ್ತಿನಮೇಲೆ ಋಣಭಾರ ಮಾಡಿಕೊಂಡಲ್ಲಿ ಅಂತಹ ವ್ಯವಹಾರಗಳು ಅಸಿಂಧುವಾಗಿರುತ್ತವೆ ಎಂದು ಈ ಮೂಲಕ ಘೋಷಿಸಲಾಗಿದೆ ಮತ್ತು ಸದರಿ ಕಲಂ 166(2) ರಂತೆ ಈ ವಿಷಯವನ್ನು ಎಲ್ಲಾ ಸಾರ್ವಜನಿಕ ಮಾಹಿತಿಗಾಗಿ ಪ್ರಕಟಿಸಲಾಗಿದೆ.

1. ಮುಖ್ಯ ಮಿಶನರಿ ಹೊಂದಿರುವ ಕಟ್ಟಡಕ್ಕೆ ಉತ್ತರ ದಿಕ್ಕಿನಲ್ಲಿರುವ ಗೋಡಾನ್ ನಂ-1 ಮತ್ತು 2.
2. ಸದರಿ ಕಾರ್ಖಾನೆಯ ಉತ್ತರ ಮತ್ತು ಉತ್ತರ ಪಶ್ಚಿಮ ಭಾಗಲ್ಲಿರುವ ಗೋಡಾನ್ ನಂ-3 ಮತ್ತು 4.
3. ಒಳಭಾಗದಲ್ಲಿ ಡಿಸ್ಟಿಲರಿಗೆ ಹೋಗುವ ರಸ್ತೆಯ ಪೂರ್ವ ಭಾದಲ್ಲಿರುವ ನಂಬರ್ ಗಳಿಲ್ಲದ ಎರಡು ಗೋಡಾನ್ ಗಳು.
4. ಐ. ಎಸ್ ಆರ್. ಕಾರ್ಖಾನೆಗೆ ಸೇರಿರುವ ಈ ಕೆಳಕಾಣಿಸಿದ ಜಮೀನುಗಳು ಹಾಗೂ ನಗರಸಭೆ ಹೊಸಪೇಟೆ ಇವರು ನೀಡಿರುವ ಸ್ಥಿರ ಸ್ವತ್ತುಗಳು.

ಕ್ರಮ ಸಂಖ್ಯೆ	ಸರ್ವೇ ನಂಬರ್	ವಿಸ್ತೀರ್ಣ ಎ - ಸೆಂ	ಸ್ಥಿರ ಸ್ವತ್ತು ವಿವರ	ಉಪನೊಂದಣಾಧಿಕಾರಿಗಳ ಮೌಲ್ಯ (ರೂ.ಗಳಲ್ಲಿ)
			ಸ್ಥಿರ ಸ್ವತ್ತು ವಿವರ	
			ಗ್ರಾಮ ಹೊಸಪೇಟೆ	
1	1	3.66	ಇಂಡಿಯನ್ ಶುಗರ್ ರೆಫೆನರೀ, ಮ್ಯಾನೇಜರ್	4567680
2	2	13.82	ಇಂಡಿಯನ್ ಶುಗರ್ ರೆಫೆನರೀ, ಮ್ಯಾನೇಜರ್	17247360
3	3	9.39	ಇಂಡಿಯನ್ ಶುಗರ್ ರೆಫೆನರೀ, ಮ್ಯಾನೇಜರ್	11718720
4	4	0.98	ಇಂಡಿಯನ್ ಶುಗರ್ ರೆಫೆನರೀ, ಮ್ಯಾನೇಜರ್	1223040
5	11/ಸ	1.93	ಇಂಡಿಯನ್ ಶುಗರ್ ರೆಫೆನರೀ, MG ನರಬಾದ್ ಜಾರಿಟೆಬಲ್	2408640
	ಒಟ್ಟು	29.78		37165440
	ಅಸೆಸ್ ಮೆಂಟ್ ನಂ.	ಡೋರ್ ನಂಬರ್	ಸ್ಥಿರ ಸ್ವತ್ತು ವಿವರ	
1	38	37	ಐ.ಎಸ್.ಆರ್. ಲಿಮಿಟೆಡ್	(All RCC Buildings Rs.900/- per Sq. ft. AC Sheet Rs.375 per Sheet)
2	37	36	ಐ.ಎಸ್.ಆರ್. ಲಿಮಿಟೆಡ್	
3	36	35	ಐ.ಎಸ್.ಆರ್. ಲಿಮಿಟೆಡ್	
4	35	34	ಐ.ಎಸ್.ಆರ್. ಲಿಮಿಟೆಡ್	
5	34	33	ಐ.ಎಸ್.ಆರ್. ಲಿಮಿಟೆಡ್	
6	33	32	ಐ.ಎಸ್.ಆರ್. ಲಿಮಿಟೆಡ್	
7	39	38	ಐ.ಎಸ್.ಆರ್. ಲಿಮಿಟೆಡ್	
8	40	39	ಐ.ಎಸ್.ಆರ್. ಲಿಮಿಟೆಡ್	
9	41	40	ಐ.ಎಸ್.ಆರ್. ಲಿಮಿಟೆಡ್	
10	42	41	ಐ.ಎಸ್.ಆರ್. ಲಿಮಿಟೆಡ್	
11	43	42	ಐ.ಎಸ್.ಆರ್. ಲಿಮಿಟೆಡ್	
12	44	43	ಐ.ಎಸ್.ಆರ್. ಲಿಮಿಟೆಡ್	
13	45	44	ಐ.ಎಸ್.ಆರ್. ಲಿಮಿಟೆಡ್	

14	46		45	ಐ.ಎಸ್.ಆರ್. ಲಿಮಿಟೆಡ್	
15	47		46	ಐ.ಎಸ್.ಆರ್. ಲಿಮಿಟೆಡ್	
16	48		47	ಐ.ಎಸ್.ಆರ್. ಲಿಮಿಟೆಡ್	
17	49		48	ಐ.ಎಸ್.ಆರ್. ಲಿಮಿಟೆಡ್	(All RCC Buildings Rs.900/- per Sq. ft. AC Sheet Rs.375 per Sheet)
18	50		49	ಐ.ಎಸ್.ಆರ್. ಲಿಮಿಟೆಡ್	
19	51		50	ಐ.ಎಸ್.ಆರ್. ಲಿಮಿಟೆಡ್	
20	52		51	ಐ.ಎಸ್.ಆರ್. ಲಿಮಿಟೆಡ್	
21	53		52	ಐ.ಎಸ್.ಆರ್. ಲಿಮಿಟೆಡ್	
22	211		203 ರಿಂದ 347	ಐ.ಎಸ್.ಆರ್. ಲಿಮಿಟೆಡ್-ಸ್ಟಾವ್ ಕ್ವಾಟ್ರ್ಸ	
23	214		350 ರಿಂದ 461	ಐ.ಎಸ್.ಆರ್. ಲಿಮಿಟೆಡ್-ಸ್ಟಾವ್ ಕ್ವಾಟ್ರ್ಸ	
24	215		462	ಐ.ಎಸ್.ಆರ್. ಲಿಮಿಟೆಡ್-ಸ್ಟಾವ್ ಕ್ವಾಟ್ರ್ಸ	
25	215/A		462/A	ಐ.ಎಸ್.ಆರ್. ಲಿಮಿಟೆಡ್-ಸ್ಟಾವ್ ಕ್ವಾಟ್ರ್ಸ	
26	215/B		462/B	ಐ.ಎಸ್.ಆರ್. ಲಿಮಿಟೆಡ್-ಸ್ಟಾವ್ ಕ್ವಾಟ್ರ್ಸ	
			ಗ್ರಾಮಅಮರಾವತಿ		ಟ
	ಸರ್ವೇ ನಂಬರ್		ವಿಸ್ತೀರ್ಣ	ಸ್ಥಿರ ಸ್ವತ್ತು ವಿವರ	
1	220		11.45	ಇಂಡಿಯನ್ ಶುಗರ್ ರೆಫೆನರೀ, ಲಿಮಿಟೆಡ್, ಚಿತ್ತವಾಡಿಗಿ.	10717200
2	221		5.5	ಇಂಡಿಯನ್ ಶುಗರ್ ರೆಫೆನರೀ, ಲಿಮಿಟೆಡ್, ಚಿತ್ತವಾಡಿಗಿ.	5148000
3	222		1.35	ಇಂಡಿಯನ್ ಶುಗರ್ ರೆಫೆನರೀ, ಲಿಮಿಟೆಡ್, ಚಿತ್ತವಾಡಿಗಿ.	1263600
4	234/ಸ		0.21	ಇಂಡಿಯನ್ ಶುಗರ್ ಫ್ಯಾಕ್ಟರಿ	262080
5	237/ಎ		0.23	ಇಂಡಿಯನ್ ಶುಗರ್ ಫ್ಯಾಕ್ಟರಿ	287040
6	237ಸ/1ಬಿ		0.11	ಇಂಡಿಯನ್ ಶುಗರ್ ಫ್ಯಾಕ್ಟರಿ	137280
7	241/ಸ		2.24	ಇಂಡಿಯನ್ ಶುಗರ್ ಫ್ಯಾಕ್ಟರಿ	2795520
8	242/ಎ		0.17	ಇಂಡಿಯನ್ ಶುಗರ್ ಫ್ಯಾಕ್ಟರಿ	212160
9	243		5	ಇಂಡಿಯನ್ ಶುಗರ್ ಫ್ಯಾಕ್ಟರಿ	6240000
10	245/2		0.17	ಇಂಡಿಯನ್ ಶುಗರ್ ಫ್ಯಾಕ್ಟರಿ	212160
11	251/ಎಫ್		3.42	ಇಂಡಿಯನ್ ಶುಗರ್ ಫ್ಯಾಕ್ಟರಿ	428160
12	275/ಪಿ3/ಎ/2		0.8	ಕಾರ್ಖ ದರ್ಜೆ ಐ.ಎಸ್.ಆರ್.	998400
	ಒಟ್ಟು		30.65		32541600
			ಗ್ರಾಮ 88-ಮುದ್ದಾಪುರ.		
	ಸರ್ವೇ ನಂಬರ್		ವಿಸ್ತೀರ್ಣ	ಸ್ಥಿರ ಸ್ವತ್ತು ವಿವರ	
1	148		1.07	ಕಾರ್ಖ ದರ್ಜೆ ದಿ ಇಂಡಿಯನ್ ಶುಗರ್	564960
2	234/ಬಿ/3		3.08	ಕಾರ್ಖ ದರ್ಜೆ ದಿ ಇಂಡಿಯನ್ ಶುಗರ್	1626240
	ಒಟ್ಟು		4.15		2191200

ಗೆ,

ದಿ ಇಂಡಿಯನ್ ಸುಗರ್ಸ್ & ರಿಫಿನೆರೀಸ್ ಲಿ. ಚಿತ್ತವಾಡಿಗಿ, ಹೊಸಪೇಟೆ.

ತಹಶೀಲ್ದಾರರು. ಹೊಸಪೇಟೆ.

ಪ್ರತಿಯನ್ನು ದಯಾಪರ ಮಾಹಿತಿಗಾಗಿ - 4 -

1. ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಸಹಾಯಕ ಆಯುಕ್ತರು, ಹೊಸಪೇಟೆ ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ

1. ಆಯುಕ್ತರು, ನಗರಸಭೆ, ಹೊಸಪೇಟೆ ಇವರಿಗೆ ಮುಂದಿನ ಕ್ರಮಕ್ಕಾಗಿ ರವಾನಿಸಲಾಗಿದೆ.
2. ಆಯುಕ್ತರು, ಹುಡಾ, ಹೊಸಪೇಟೆ ಇವರಿಗೆ ಮೂಂದಿನ ಕ್ರಮೆಕ್ಕಾಗಿ ರವಾನಿಸಿದೆ.
3. ಉಪನೊಂದಣಾಧಿಕಾರಿಗಳು, ಹೊಸಪೇಟೆ ಇವರಿಗೆಮುಂದಿನ ಕ್ರಮಕ್ಕಾಗಿ ರವಾನಿಸಿದೆ.
4. ತಾಲೂಕು ಕಛೇರಿಯ ಸೂಚನಾಫಲಕಕ್ಕೆ ಪ್ರಚಾರಕ್ಕಾಗಿ
5. ಕಂದಾಯ ನಿರೀಕ್ಷಕರು, ಹೊಸಪೇಟೆ ಇವರಿಗೆ ಮುಂದಿನ ಕ್ರಮಕ್ಕಾಗಿ ರವಾನಿಸಿದೆ.
6. ಗ್ರಾಮ ಲೆಕ್ಕಾಧಿಕಾರಿ ಚಿತ್ತವಾಡಿಗಿ, ಅಮರಾವತಿ, ಹೊಸಪೇಟೆ ಮತ್ತು 88-ಮುದ್ದಾಪುರ ಇವರಿಗೆ ಮುಂದಿನ ಕ್ರಮಕ್ಕಾಗಿ.